## ನಿಗೂಢ ಪುಷ್ಪಗಳು

ಪ್ರಾಕೃತಿಕ ಜೀವರಾಶಿಗಳಲ್ಲಿ ಪುಷ್ಪ ಸಂಕುಲ ಕೂಡ ಅಸಂಖ್ಯಾತ ಪ್ರಭೇದಗಳನ್ನು ಒಳಗೊಂಡಿದೆ. ಹೂವಿನಲ್ಲಿಯೇ ಸಾವಿರಾರು ಬಗೆ. ಅದರಲ್ಲಿ ಕೆಲವು ಪೂಜೆಗೂ ಅಲ್ಲದೆ, ಮುಡಿಗೂ ಏರದೆ ಕವಿವಾಣಿಯಂತೆ ನರಳುವುದು ಬಿಟ್ಟಿಲ್ಲ. ಕೆಲವೊಂದು ನಿಗೂಢವಾಗಿಯೇ ಅಳಿದುಬಿಡುತ್ತವೆ. ಹುಟ್ಟಿದ ಕೆಲವೇ ಕ್ಷಣ ಅಥವಾ ಗಂಟೆಗಳಲ್ಲಿ ಅವುಗಳ ಬದುಕು ಕ್ಷೀಣಿಸುತ್ತದೆ. ಆದರೆ ಹುಟ್ಟು ಸಾವಿನ ನಡುವೆಯೇ ತಮ್ಮತ್ತ ಆಕರ್ಷಿಸುವ ಗುಣ ಮಾತ್ರ ಅಸದಳ. ಗೊಬ್ಬರ, ನೀರು ಬೇಡದೆ ಎಂದೋ ಸುರಿದ ಮಳೆಯ ನೀರಿನ ಸೆಲೆಯನ್ನ ಬಳಸಿಕೊಂಡು, ಬಿರುಬಿಸಿಲಿನ ಬರಡು ನೆಲದಲ್ಲಿ ರಾಣಿಯಂತೆ ಅರಳಿ ನಿಂತಿರುವ ಈ ಪುಷ್ಪ ತನ್ನತ್ತ ಗಮನಸೆಳೆಯಿತು. ಇದರ ಬಗ್ಗೆ ಹೆಚ್ಚಿನ ವಿವರ ಮಾತ್ರ ಗೊತ್ತಿಲ್ಲ.

—ಎನ್. ಕೃಷ್ಣಮೂರ್ತಿ ರಾವ್





## ರೂಪಾಂತರ

ಈ ಚಿತ್ರಗಳು ಒಂದೇ ಗಿಡದ್ದು. ಒಂದು ಚಿತ್ರದಿಂದ ಮತ್ತೊಂದು ಚಿತ್ರಕ್ಕೆ ಐದು ದಿನಗಳ ಅಂತರವಿದೆ. ಎಲೆಗಳೆಲ್ಲಾ ಪೂರ್ತಿ ಉದುರಿ ಬೋಳಾಗಿದ್ದ ಗಿಡ ಐದು ದಿನಗಳ ನಂತರ ಚಿಗುರಿತ್ತು. ಇನ್ನೈದು ದಿನಗಳಲ್ಲಿ ಪೂರ್ತಿ ಗಿಡ ಹಸಿರೆಲೆಗಳಿಂದ ತುಂಬಿ ಹೋಗಿತ್ತು. ಕೆಲದಿನಗಳ ಹಿಂದೆ ಬೋಳಾಗಿದ್ದ ಗಿಡ ಮತ್ತೆ ಹಚ್ಚ ಹಸಿರಿನ ಹೊದಿಕೆ ಹೊದ್ದು ನಗುವುದನ್ನು ಕಂಡಾಗ ನಿಸರ್ಗದ ಶಕ್ತಿಗೆ ಮನಸೋಲುವ ಸರದಿ ನನ್ನದಾಗಿತ್ತು.

—ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

## ದಿಕ್ಕು ಮಲ್ಲಿಗೆ

ಸೂರ್ಯನ ಬಿಸಿಲಿಗೆ ಬಾಡದೇ ನಾಲ್ಕೂ ದಿಕ್ಕುಗಳಿಗೆ ಅರಳಿ ನಿಲ್ಲುವ ಈ ಹೂವನ್ನು ಮಲೆನಾಡಿನಲ್ಲಿ ದಿಕ್ಕು ಮಲ್ಲಿಗೆ ಎಂದು ಕರೆಯುತ್ತಾರೆ. ಯಾವುದೇ ಪರಿಮಳವಿಲ್ಲದಿದ್ದರೂ ನೆಲದಾಳದ ಗಡ್ಡೆಯಿಂದಲೇ ತನ್ನ ಸಸ್ಯಾಭಿವೃದ್ಧಿ ಹೆಚ್ಚಿಸಿಕೊಳ್ಳುವ ಈ ದಿಕ್ಕು ಮಲ್ಲಿಗೆಯ ಹೂ ಕೇಸರಿ ವರ್ಣದಿಂದ ಆಕರ್ಷಣೀಯವಾಗಿ ಕಾಣುತ್ತದೆ. ತಿಂಗಳುಗಳ ಕಾಲ ನಿತ್ಯ ಅರಳುವ ಈ ಗಿಡವು ಕಡಿಮೆ ನೀರಿರುವ ಕಡೆಯಲ್ಲೂ ಬೆಳೆಯಬಲ್ಲದು. ಮಲೆನಾಡಿನ ವನವಾಸಿ ಸಮುದಾಯದ ಹೆಂಗಳೆಯರು ಈ ಹೂಗಳನ್ನು ಬಾಳೆನಾರಿನಿಂದ ಕಟ್ಟಿ ಮುಡಿಗೆ ದಂಡೆಯಾಗಿ ಸಾಂಪ್ರದಾಯಿಕವಾಗಿ ಅಲಂಕರಿಸಿಕೊಳ್ಳುವ ಮೂಲಕ ಈ ದಿಕ್ಕು ಮಲ್ಲಿಗೆಯ ಸೌಂದರ್ಯವನ್ನು ಹೆಚ್ಚಿಸಿದ್ದಾರೆ.

—ದತ್ತಾತ್ರೇಯ ಭಟ್ಟ, ಕಣ್ಣಿಪಾಲ ಯಲ್ಲಾಪುರ

